ಫ್ರೀಡಂ ನ್ಯೂಸ್

# ಸಂಸ್ಕೃತಿ ಮಾರಿಕೊಂಡ್ರಾ 'ಜೋಗಿ' ಪ್ರೇಮ್?

## ರಕ್ಷಿತಾ ಅವರೇ, ನಿಮ್ಮ ಪತಿಯ ಈ ಕೀಳು ಅಭಿರುಚಿ ನಿಮಗೆ ಕಾಣುತ್ತಿಲ್ಲವೇ?




**ಬೆಂಗಳೂರು:** ಕನ್ನಡ ಚಿತ್ರರಂಗದ ಹೆಸರಾಂತ ನಿರ್ದೇಶಕ ಜೋಗಿ ಪ್ರೇಮ್ ಅಕ್ಷರಶಃ ಕನ್ನಡಿಗರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಪ್ರಚಾರಕ್ಕಾಗಿ ಎಷ್ಟು ಕೀಳು ಮಟ್ಟಕ್ಕೆ ಇಳಿಯಬಹುದು ಎಂಬುದಕ್ಕೆ ಅವರ ನಿರ್ದೇಶನದ 'ಕೆಡಿ' (KD) ಚಿತ್ರದ 'ಸರ್ಸೆ ನಿನ್ನ ಸೆರಗ ಸರ್ಸೆ' ಹಾಡೇ ಸಾಕ್ಷಿ. ಈ ಹಾಡಿನಲ್ಲಿ ನಟಿ ನೋರಾ ಫತೇಹಿ ಮತ್ತು ಸಂಜಯ್ ದತ್ ಅವರ ಅಸಹ್ಯಕರ ನಟನೆ ಒಂದೆಡೆಯಾದರೆ, ಪ್ರೇಮ್ ಅವರೇ ಬರೆದಿರುವ ಅಶ್ಲೀಲ ಸಾಹಿತ್ಯ ಕನ್ನಡಿಗರ ಸಂಸ್ಕಾರವನ್ನೇ ಹರಾಜು ಹಾಕುವಂತಿದೆ. ಹಿಟ್ ಸಿನಿಮಾ ನೀಡುವ ಯೋಗ್ಯತೆ ಇಲ್ಲದೆ, ಕೇವಲ ವ್ಯೂಸ್ ಮತ್ತು ಹಣದ ಆಸೆಗೆ ಬಿದ್ದು ಗೀತರಚನೆಕಾರರಾಗಿ ಇಷ್ಟು ಕೀಳು ಮಟ್ಟಕ್ಕೆ ಇಳಿದಿದ್ದನ್ನು ನೋಡಿ ಇಡೀ ರಾಜ್ಯವೇ ಛೀಮಾರಿ ಹಾಕುತ್ತಿದೆ.


ಸೋಷಿಯಲ್ ಮೀಡಿಯಾದಲ್ಲಿ ಪ್ರೇಮ್ ವಿರುದ್ಧ ಆಕ್ರೋಶದ ಜ್ವಾಲೆ ಎದ್ದಿದ್ದು, ನೆಟ್ಟಿಗರು ಮಸಿ ಬಳಿಯದಷ್ಟೇ ಬಾಕಿ ಎಂಬಂತೆ ಕಿಡಿಕಾರುತ್ತಿದ್ದಾರೆ. "ಕನ್ನಡಿಗರ ಮನೆ ಮಗಳ ಸೆರಗಿನ ಬಗ್ಗೆ ಇಷ್ಟು ಅಸಭ್ಯವಾಗಿ ಹಾಡು ಬರೆಯಲು ನಿಮಗೆ ನಾಚಿಕೆಯಾಗುವುದಿಲ್ಲವೇ?" ಎಂದು ಸಾರ್ವಜನಿಕರು ನೇರವಾಗಿ ಪ್ರಶ್ನಿಸುತ್ತಿದ್ದಾರೆ. ಗಾಯಕ ಅರ್ಮಾನ್ ಮಲ್ಲಿಕ್ ಅವರಂತಹ ದಿಗ್ಗಜರೇ ಈ ಹಾಡಿನ ಸಾಹಿತ್ಯದ ಬಗ್ಗೆ ಅಸಹ್ಯ ವ್ಯಕ್ತಪಡಿಸಿದ್ದು, ಇದು ಕನ್ನಡಿಗರ ಸ್ವಾಭಿಮಾನಕ್ಕೆ ಬಿದ್ದ ದೊಡ್ಡ ಪೆಟ್ಟು. ಬಾಲಿವುಡ್ ನಟಿಯ ಗ್ಲಾಮರ್ ತೋರಿಸುವ ಭರದಲ್ಲಿ ಕನ್ನಡದ ಘನತೆಯನ್ನು ಮಣ್ಣುಪಾಲು ಮಾಡುತ್ತಿರುವ ಪ್ರೇಮ್, ತಕ್ಷಣವೇ ಕ್ಷಮೆಯಾಚಿಸಬೇಕೆಂದು ಜನ ಆಗ್ರಹಿಸುತ್ತಿದ್ದಾರೆ.

ಏಪ್ರಿಲ್ 30ರಂದು ಸಿನಿಮಾ ಬಿಡುಗಡೆಯಾಗುವ ಮುನ್ನವೇ ಈ ರೀತಿಯ ವಿವಾದ ಮಾಡಿಕೊಳ್ಳುವುದು ಪ್ರೇಮ್ ಅವರ ಹಳೇ ಚಾಳಿ. ಈ ಹಿಂದೆ 'ಮೇಲುಕೋಟೆ ಹುಡುಗಿ' ಹಾಡಿನ ಮೂಲಕ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದ್ದ ಇವರು, ಈಗ ಇಡೀ ಸಮಾಜವೇ ತಲೆತಗ್ಗಿಸುವಂತಹ ಕೆಲಸ ಮಾಡಿದ್ದಾರೆ. ಕುಟುಂಬ ಸಮೇತ ಕುಳಿತು ನೋಡಲಾಗದ ಇಂತಹ ಹಾಡುಗಳನ್ನು ನೀಡುವ ಮೂಲಕ ಪ್ರೇಮ್ ಅವರು ಸಿನಿರಸಿಕರ ಪಾಲಿಗೆ ವಿಲನ್ ಆಗಿ ಬದಲಾಗಿದ್ದಾರೆ. ಕನ್ನಡಿಗರು ಇಂತಹ ಅಶ್ಲೀಲತೆಯನ್ನು ಎಂದಿಗೂ ಸಹಿಸುವುದಿಲ್ಲ ಎಂಬ ಎಚ್ಚರಿಕೆ ಈಗ ಎಲ್ಲೆಡೆ ಮೊಳಗುತ್ತಿದೆ.









# Editorial




# ಕುಬೇರ ಯೋಗದ DK ಗೆ ರಾಜಯೋಗ ಯಾವಾಗ..?

## ಸಿದ್ದು ದೇಶದಲ್ಲೇ ಸ್ಟ್ರಾಂಗ್ CM ಅಂದಿದ್ದೇಕೆ ವೇಣುಗೋಪಾಲ್..?





ಪ್ರೀತಿಯ ಓದುಗರೇ.. ಡಿಕೆ ಶಿವಕುಮಾರ್ ಸಿಎಂ ಆಗ್ತಾರಾ ಇಲ್ವಾ ಅನ್ನೋ ಪ್ರಶ್ನೆ ಎಲ್ಲರಲ್ಲಿದೆ. ಇದೇ ವೇಳೆ ಡಿಕೆಯನ್ನು ರಾಜಕೀಯದ ಪುಷ್ಪ, ಎಷ್ಟು ಬೇಕೋ ಕೊಡ್ತೀನಿ ಸಿಎಂ ಮಾಡಿ ಎಂದು ರಾಹುಲ್ ಬಳಿ ಕೇಳುವಂತೆ ಎಐ ಫೋಟೋವನ್ನು ಜೆಡಿಎಸ್ ತನ್ನ ಪೇಜ್ ಗಳಲ್ಲಿ ಹಾಕಿ ವ್ಯಂಗ್ಯಮಾಡಿದೆ. ಇತ್ತ ಸಿದ್ದರಾಮಯ್ಯ ದೇಶದ ಅತ್ಯಂತ ಸ್ಟ್ರಾಂಗ್ ಲೀಡರ್ ಎಂದು ಕಾಂಗ್ರೆಸ್ ಉಸ್ತುವಾರಿ ವೇಣುಗೋಪಾಲ್ ಹೇಳಿರುವುದು ಮತ್ತಷ್ಟು ಅಚ್ಚರಿಗೆ ಕಾರಣವಾಗಿದೆ. ಇದು ಡಿಕೆ ಮತ್ತು ಬೆಂಬಲಿಗರಲ್ಲಿ ಇವೆಲ್ಲ ದುಗುಡಕ್ಕೆ ಕಾರಣವಾಗಿವೆ.

ಡಿಕೆ ಶಿವಕುಮಾರ್, ಉಪಮುಖ್ಯಮಂತ್ರಿಗಳು, ಬೆಂಗಳೂರು ನಗರಾಭಿವೃದ್ಧಿ, ಜಲ ಸಂಪನ್ಮೂಲ ಮಂತ್ರಿಗಳು, ಅಷ್ಟೇ ಅಲ್ಲ ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು. ಇಂಥ ಭಾರೀ ಹುದ್ದೆಗಳ ಮೇಲೆ ಕೂತ ಇವರಿಗೆ ಸದ್ಯಕ್ಕೆ ಕುಬೇರಯೋಗ ನಡೆಯುತ್ತಿದೆ.

ಕಲಾಸಿಪಾಳ್ಯದ ಮಜೂರ್ ಗಳಿಂದ ಹಿಡಿದು ರಾಜಧಾನಿಯ ಹುಜೂರ್ ಗಳ ವರೆಗೆ.. ಪಂಚಾಯ್ತಿಯ ಪಡಸಾಲೆಯ ಜಾಡಮಾಲಿ ಯಿಂದ ವಿಧಾನಸೌಧದ ಮೊಗಸಾಲೆಯ ಕಾರ್ಯದರ್ಶಿವರೆಗೆ ಎಲ್ಲರ ಆಟವೂ ಈ ಸ್ಟ್ರೀಟ್‌ಫೈಟರ್ ಗೆ ಗೊತ್ತು. ಈ ಇಲಾಖೆಗಳಲ್ಲಿ ಇವರ ಗಮನಕ್ಕೆ ಬಾರದೆ ಹುಲ್ಲುಕಡ್ಡಿಯೂ ಅಲುಗಾಡುವುದಿಲ್ಲ. ಪ್ಯೂನ್ ನಿಂದ ಹಿಡಿದು ಕಾರ್ಯದರ್ಶಿ ವರೆಗೆ ಕೆಮ್ಮಿದರೂ ಇವರಿಗೆ ವರದಿ ಬರುತ್ತದೆ. ಯಾವ ಕಾರಕೂನ ಎಲ್ಲಿಗೆ ಹೋಗಿ ಬಂದ.. ಅವನ್ಯಾರು, ಅವನ ನೆಂಟರು ಯಾರು..? ಅವರ ಸೇವಕರು ಯಾರು? ಎಂಬುದೆಲ್ಲ ಬಂಡೆಣ್ಣಗೆ ಕರತಲಾಮಲಕ. ಹಾಗಾಗಿ ಇವರ ಎದುರು ಯಾರೂ ಬಾಲ ಬಿಚ್ಚಲ್ಲ. ಕಮಕ್ ಕಿಮಕ್ ಅನ್ನಲ್ಲ. ಒಣ ಭಾಷಣ ಮಾಡಿದರೆ ಕೇಳಲ್ಲ... ಮಡಗೋ ಲೇ ಗೊತ್ತಿದೆ ಎನ್ನೊ ನೇರವಂತಿಕೆ.

ಇಂತಿಪ್ಪ ಒಬ್ಬ ರಾಜಕಾರಣಿಗೆ ದೇವರು ಎಷ್ಟು ಕೊಡಬಹುದೋ, ಅದಕ್ಕೂ ಹೆಚ್ಚು ಡಿಕೆಗೆ ಕೊಟ್ಟಿದ್ದಾನೆ. ಆದರೆ ಕನಕಪುರದ ದೊಡ್ಡ ಕನಸುಗಾರನಿಗೆ ಕುಬೇರಯೋಗ ಸುಖ ಕೊಡ್ತಿಲ್ಲ. ಅವರಿಗೆ ರಾಜಯೋಗ ಬೇಕು. ಅದು ಸಿಎಂ ಕುರ್ಚಿಯ ಮೇಲೆ ಕೂರುವ ರಾಜಯೋಗದ ಕನಸು.

ಬೀದಿಯಲ್ಲಿ ಬೆಳೆದ ಹುಡುಗನೊಬ್ಬ ತಮ್ಮ ಎದುರು ನಿಲ್ಲುವುದು ಹಲವು ಕಾಂಗ್ರೆಸ್ ಹಿರಿತಲೆಗಳಿಗೆ ಇಷ್ಟವಿಲ್ಲ. ಇದಕ್ಕೆ ಅವರು ಆ ಕಾಲದಿಂದಲೂ ಡಿಕೆಗೆ ಸಿಡಿ ಶಿವು, ಕೊತ್ವಾಲ್ ಶಿಷ್ಯ, ಗ್ರಾನೈಟ್ ಗಿರಾಕಿ, ಕನಕಪುರ ಡಿಕ್ಟೇಟರ್, ಧಮ್ಕಿ ಶಿವ, ಹೈಜಾಕ್ ಕುಮಾರ್, ಡೆಡ್ಲಿ ಡೀಲರ್, ಪೊಲಿಟಿಕಲ್ ಬ್ಯುಸಿನೆಸ್ಮನ್ ಇತ್ಯಾದಿ ಹೆಸರಿಡುತ್ತಿದ್ದಾರೆ. ಈ ನೆಗೆಟಿವ್ ಹೆಸರುಗಳನ್ನು ತನ್ನ ಕೆರಿಯರ್ ನ ಬಯೋಡೇಟಾದಿಂದ ಅಳಿಸುವ ಹಠ ಡಿಕೆಯದ್ದು.

ಬದಲಿಗೆ, ಮೇಲಿನ ನೆಗೆಟಿವ್ ಶೇಡ್ ಬದಲು ಕಾಂಗ್ರೆಸ್ ಟ್ರಬಲ್ ಶೂಟರ್, ಸೋನಿಯಾ ಭಕ್ತ, ದಳಪತಿಗಳ ಧಗಡ್, ಡೂ ಆರ್ ಡೈ ಡಿಕೆ, ಜೈಂಟ್ ಕಿಲ್ಲರ್ ಇತ್ಯಾದಿ ವಿಶೇಷಣಗಳ ಜತೆ ಪಿಆರ್ ಗಿರಿ ಮಾಡಿಸಿಕೊಳ್ಳುತ್ತಾ ದುಡಿತಿದ್ದಾರೆ. ರಾಜನ ಪದವಿ ಸಿಗಲು ಇತಿಹಾಸ ಎಷ್ಟು ಮುಖ್ಯ ಅಲ್ಲವಾ..?

# DK's Wait for Rajayoga

Dear readers, The question on everyone's mind right now is — will D.K. Shivakumar become the Chief Minister or not?

At the same time, the JD(S) has mocked him by posting an AI-generated image on its pages, portraying D.K. Shivakumar as a political opportunist pleading with Rahul Gandhi, saying, "Make me the CM, I will give you whatever you want."

On the other hand, Congress General Secretary K.C. Venugopal's statement calling Siddaramaiah "the strongest leader in the country" has added to the surprise and speculation. These developments have caused visible disappointment among D.K. Shivakumar and his supporters.

D.K. Shivakumar is not just the Deputy Chief Minister. He also holds key portfolios such as Bengaluru Development and Water Resources, and serves as the President of the Karnataka Congress. Sitting in such powerful positions, he is currently enjoying what can be described as a "Kubera Yoga" — a phase of immense power and influence.

From laborers in Kalasipalya to elites in the capital... from grassroots workers in panchayats to secretaries in Vidhana Soudha — he understands the functioning of every layer of the system. Not even a blade of grass moves in these departments without his knowledge. From peons to top officials, even the slightest movement is reported to him. Who went where, who met whom, who their associates are — everything is at his fingertips.

That is why no one dares to challenge him openly. No one acts casually in his presence. Empty speeches don't impress him — he believes in getting things done and knows exactly how to make it happen.

For a politician, it is said that God gives only so much — but in D.K. Shivakumar's case, he seems to have received even more than that. Yet, this phase of power does not satisfy the big dreamer from Kanakapura. What he seeks is not just influence, but authority — the "Rajayoga" of sitting on the Chief Minister's chair.

However, many senior Congress leaders are uncomfortable with the rise of a man who grew up on the streets now standing as their equal. Since earlier times, they have branded him with various negative tags such as "CD Shivakumar," "Kotwal's disciple," "Granite dealer," "Kanakapura dictator," "Threat Shiv," "Hijack Kumar," "Deadly dealer," and "Political businessman."

D.K. Shivakumar has been striving to erase these negative labels from his political biography.

Instead, he has been carefully building a new image through strong public relations — portraying himself as the "Congress troubleshooter," "Devotee of Sonia," "Leader of leaders," "Do-or-die DK," and "Giant killer."

After all, isn't history crucial when it comes to earning the throne?

# ಗದಗದಲ್ಲಿ ವಿದ್ಯಾರ್ಥಿಗಳೇ ಟಾರ್ಗೆಟ್: ಸ್ಕಾಲರ್‌ಶಿಪ್ ಆಸೆಗೆ ಬಿದ್ದ ಅಮಾಯಕರ ಖಾತೆ ಬಳಸಿ ಕೋಟಿ ಕೋಟಿ ಸೈಬರ್ ದೋಖಾ!



**ಗದಗ:** ವಿದ್ಯಾಕಾಶಿಯಲ್ಲಿ ಸ್ಕಾಲರ್‌ಶಿಪ್ ಕೊಡಿಸುವ ಸೋಗಿನಲ್ಲಿ ಬಡ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳನ್ನು ಸೈಬರ್ ಅಪರಾಧಕ್ಕೆ ಬಳಸಿಕೊಳ್ಳುತ್ತಿದ್ದ ಅಂತರರಾಜ್ಯ ಖದೀಮರ ಜಾಲವನ್ನು ಗದಗ ಪೊಲೀಸರು ಬೇಟೆಯಾಡಿದ್ದಾರೆ. ವಸತಿ ನಿಲಯದ ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು 'ಮ್ಯೂಲ್ ಖಾತೆ' (Mule Accounts) ತೆರೆಯುತ್ತಿದ್ದ ಐವರು ಆರೋಪಿಗಳನ್ನು ಪೊಲೀಸರು ಜೈಲಿಗಟ್ಟಿದ್ದಾರೆ.

ದಾನಿಗಳಂತೆ ನಟಿಸಿ ದೋಖಾ: ಈ ಜಾಲದ ಕಿಲಾಡಿಗಳು ಗದಗದ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳನ್ನು ಸಂಪರ್ಕಿಸಿ, ತಾವು ದೊಡ್ಡ ದಾನಿಗಳು ಎಂದು ನಂಬಿಸುತ್ತಿದ್ದರು. "ನಿಮಗೆ ವಿದ್ಯಾರ್ಥಿವೇತನ ಕೊಡಿಸುತ್ತೇವೆ" ಎಂದು ಸುಳ್ಳು ಭರವಸೆ ನೀಡಿ, ಬ್ಯಾಂಕ್ ಆಫ್ ಮಹಾರಾಷ್ಟ್ರದಲ್ಲಿ ಖಾತೆ ತೆರೆಯುವಂತೆ ಮಾಡುತ್ತಿದ್ದರು. ವಿದ್ಯಾರ್ಥಿಗಳಿಗೆ ನಂಬಿಕೆ ಬರಲಿ ಎಂದು ತಾವೇ ಪ್ರತಿ ಖಾತೆಗೆ 2,000 ರೂ. ಠೇವಣಿ ಇಡುತ್ತಿದ್ದರು. ಆದರೆ ಖಾತೆ ಸಕ್ರಿಯವಾಗುತ್ತಿದ್ದಂತೆಯೇ ಎಟಿಎಂ ಕಾರ್ಡ್, ಪಾಸ್‌ಬುಕ್ ಮತ್ತು ಇಂಟರ್ನೆಟ್ ಬ್ಯಾಂಕಿಂಗ್ ಪಾಸ್‌ವರ್ಡ್‌ಗಳನ್ನು ಕಿತ್ತುಕೊಂಡು ವಿದ್ಯಾರ್ಥಿಗಳನ್ನು ಬೀದಿಗೆ ತಳ್ಳುತ್ತಿದ್ದರು.

ಅಂತರರಾಜ್ಯ ಜಾಲಕ್ಕೆ ಪೊಲೀಸರ ಬ್ರೇಕ್: ಈ ವಂಚನೆ ಜಾಲದಲ್ಲಿ ಕರ್ನಾಟಕದ ವಿಜಯನಗರ ಜಿಲ್ಲೆಯ ವಕ್ಡೋತ್ ವಕೀಲ ಮತ್ತು ರಾಜಾ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಇವರ ಜೊತೆಗೆ ಗೋವಾದ ಹೋಟೆಲ್ ಕಾರ್ಮಿಕ ಜೀಶಾನ್ ಅಂಸಾರಿ, ಛತ್ತೀಸ್‌ಗಢದ ಡಿಜೆ ಆಕಾಶ್ ಮತ್ತು ವಿದ್ಯಾರ್ಥಿ ಸಾಹಿಲ್ ಟೆಕ್ಚಂದಾನಿ ಎಂಬುವವರನ್ನು ಅರೆಸ್ಟ್ ಮಾಡಲಾಗಿದೆ. ಈ ಜಾಲದ ಮುಖ್ಯ ಹ್ಯಾಂಡ್ಲರ್ ಕುಮಾರ್ ಎಂಬಾತ ತಲೆಮರೆಸಿಕೊಂಡಿದ್ದು, ಪೊಲೀಸರು ಆತನಿಗಾಗಿ ಬಲೆ ಬೀಸಿದ್ದಾರೆ.

ಸೈಬರ್ ಕ್ರೈಂಗೆ ಬಳಕೆ: ಬಂಧಿತರಿಂದ 11 ಮೊಬೈಲ್ ಹಾಗೂ 18 ಬ್ಯಾಂಕ್ ಕಿಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಖಾತೆಗಳನ್ನು ಅಕ್ರಮ ಗೇಮಿಂಗ್ ಹಣ ವರ್ಗಾವಣೆ ಮತ್ತು ದೊಡ್ಡ ಮಟ್ಟದ ಸೈಬರ್ ವಂಚನೆಯ ಹಣವನ್ನು ಸುರಕ್ಷಿತವಾಗಿ ಬೇರೆಡೆಗೆ ದಾಟಿಸಲು ಬಳಸಲಾಗುತ್ತಿತ್ತು ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಕಮಿಷನ್ ಆಸೆಗೆ ಬಿದ್ದು ಈ ತಂಡ ಅಮಾಯಕ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿತ್ತು. ಸದ್ಯ ಗದಗ ಸೆನ್ ಪೊಲೀಸರು ಐಟಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಚುರುಕುಗೊಳಿಸಿದ್ದಾರೆ.

## ಶಿಕ್ಷಕಿಯರಿಗೆ ಶಿಕ್ಷಣ ಇಲಾಖೆಯ ಬಿಗ್ ಗಿಫ್ಟ್: ಹೆರಿಗೆ ರಜೆ ಮಂಜೂರಾತಿಗೆ ಇನ್ಮುಂದೆ ಅಲೆಯುವಂತಿಲ್ಲ

**ಬೆಂಗಳೂರು:** ರಾಜ್ಯದ ಸರ್ಕಾರಿ ಶಾಲಾ ಶಿಕ್ಷಕಿಯರಿಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಮಹತ್ವದ ಸಿಹಿಸುದ್ದಿ ನೀಡಿದ್ದಾರೆ. ಮಾತೃತ್ವ ರಜೆ ಅಥವಾ ಶಿಶುಪಾಲನಾ ರಜೆಗೆ ಅರ್ಜಿ ಸಲ್ಲಿಸಿದ 15 ದಿನಗಳ ಒಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು (BEO) ಕಡ್ಡಾಯವಾಗಿ ಅನುಮೋದನೆ ನೀಡಬೇಕು ಎಂದು ಖಡಕ್ ಆದೇಶ ಹೊರಡಿಸಿದ್ದಾರೆ. ಒಂದು ವೇಳೆ ಅಧಿಕಾರಿಗಳು ವಿನಾಕಾರಣ ರಜೆ ಮಂಜೂರು ಮಾಡದೆ ವಿಳಂಬ ಧೋರಣೆ ಅನುಸರಿಸಿದರೆ ಅಥವಾ ಕಿರುಕುಳ ನೀಡಿದರೆ, ಶಿಕ್ಷಕಿಯರು ನೇರವಾಗಿ ಮೇಲಧಿಕಾರಿಗಳಿಗೆ ದೂರು ನೀಡಲು ಅವಕಾಶ ಕಲ್ಪಿಸಲಾಗಿದೆ. ಇಂತಹ ಪ್ರಕರಣಗಳನ್ನು ಅತ್ಯಂತ ವೇಗವಾಗಿ ಇತ್ಯರ್ಥಪಡಿಸಲು ಇಲಾಖೆಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಈ ನಿಯಮದ ಅಡಿಯಲ್ಲಿ ಕೇವಲ ರಜೆ ಮಾತ್ರವಲ್ಲದೆ, ಹೆರಿಗೆ ರಜೆ ಮುಗಿಸಿ ಮರಳುವ ಶಿಕ್ಷಕಿಯರಿಗೆ ಸರ್ಕಾರ ವಿಶೇಷ ರಿಯಾಯಿತಿ ಘೋಷಿಸಿದೆ. ರಜೆಯ ನಂತರ ಕರ್ತವ್ಯಕ್ಕೆ ಮರಳುವ ಶಿಕ್ಷಕಿಯರು ತಮಗೆ ಇಷ್ಟವಾದ ಶಾಲೆಯಲ್ಲಿ ಸತತ 5 ವರ್ಷಗಳ ಕಾಲ ಕೆಲಸ ಮಾಡಲು ಅವಕಾಶ ನೀಡಲಾಗುವುದು. ಇದು ಮಹಿಳಾ ಶಿಕ್ಷಕಿಯರಿಗೆ ತಮ್ಮ ಮಗುವಿನ ಆರೈಕೆಯ ಜೊತೆಗೆ ವೃತ್ತಿಜೀವನವನ್ನು ಸಮತೋಲನಗೊಳಿಸಲು ದೊಡ್ಡ ಮಟ್ಟದ ನೆರವು ನೀಡಲಿದೆ.



"ನಾವು ನಮ್ಮ ಆಲೋಚನೆಗಳಿಂದ ರೂಪುಗೊಂಡಿದ್ದೇವೆ; ನಾವು ಏನನ್ನು ಯೋಚಿಸುತ್ತೇವೆಯೋ ಅದೇ ಆಗುತ್ತೇವೆ. ಮನಸ್ಸು ಶುದ್ಧವಾದಾಗ, ಸಂತೋಷವು ಎಂದಿಗೂ ಬಿಡದ ನೆರಳಿನಂತೆ ಹಿಂಬಾಲಿಸುತ್ತದೆ"

- ಗೌತಮ ಬುದ್ಧ

# "ನನ್ನ ಜೊತೆ ಮಲಗಿ ಇಲ್ಲವೇ 25 ಲಕ್ಷ ಕೊಡಿ": ಸಂತ್ರಸ್ತೆಗೆ ಇನ್ಸ್‌ಪೆಕ್ಟರ್ ಬ್ಲ್ಯಾಕ್‌ಮೇಲ್



**ಮಂಗಳೂರು:** ಸಮಾಜದಲ್ಲಿ ಶಾಂತಿ ಕಾಪಾಡಬೇಕಾದ, ಸಂಕಷ್ಟದಲ್ಲಿರುವವರಿಗೆ ನ್ಯಾಯ ಕೊಡಿಸಬೇಕಾದ ಪೊಲೀಸ್ ಅಧಿಕಾರಿಯೇ ಕಾಮಪಿಶಾಚಿಯಾಗಿ ಬದಲಾದರೆ ಜನಸಾಮಾನ್ಯರು ಎಲ್ಲಿಗೆ ಹೋಗಬೇಕು? ಮಂಗಳೂರು ಕಮಿಷನರೇಟ್ ವ್ಯಾಪ್ತಿಯ ಮೂಡಬಿದ್ರೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಂದೇಶ್ ಪಿ.ಜಿ. ಎಸಗಿರುವ ಲೈಂಗಿಕ ದೌರ್ಜನ್ಯ ಮತ್ತು ಭ್ರಷ್ಟಾಚಾರದ ಸರಣಿ ಕಿರುಕುಳದ ಕಥೆಗಳು ಈಗ ರಾಜ್ಯವನ್ನೇ ಬೆಚ್ಚಿಬೀಳಿಸಿವೆ. ನ್ಯಾಯಕ್ಕಾಗಿ ಪೊಲೀಸ್ ಠಾಣೆ ಮೆಟ್ಟಿಲೇರಿದ ಅಸಹಾಯಕ ಮಹಿಳೆಯರನ್ನೇ ಬೇಟೆಯಾಡಲು ಸಂಚು ರೂಪಿಸುತ್ತಿದ್ದ ಈ ಅಧಿಕಾರಿಯ ಮುಖವಾಡ ಈಗ ಕಳಚಿ ಬಿದ್ದಿದೆ. ತನ್ನ ಅಧಿಕಾರವನ್ನು ಬಳಸಿಕೊಂಡು ಸಂತ್ರಸ್ತೆಯರ ಮೇಲೆ ಲೈಂಗಿಕ ದಾಳಿ ನಡೆಸುತ್ತಿದ್ದ ಈತನ ಕೃತ್ಯಗಳು ಕೇವಲ ಪೊಲೀಸ್ ಇಲಾಖೆಗೆ ಮಾತ್ರವಲ್ಲ, ಇಡೀ ಮಾನವಕುಲಕ್ಕೇ ಕಪ್ಪುಚುಕ್ಕೆಯಾಗಿದೆ.

ಈ ಪ್ರಕರಣದ ಅತ್ಯಂತ ಭೀಕರ ಮತ್ತು ವಿಕೃತ ಮುಖವೆಂದರೆ, ಇನ್ಸ್‌ಪೆಕ್ಟರ್ ಸಂದೇಶ್ ತಾನು ಲೈಂಗಿಕವಾಗಿ ಶೋಷಿಸಿದ್ದ ಮಹಿಳೆಯ ಅಪ್ರಾಪ್ತ ಮಗಳ ಮೇಲೂ ಕಣ್ಣು ಹಾಕಿದ್ದಾನೆ. ಸಂತ್ರಸ್ತ ಮಹಿಳೆಯ ಮಗಳು ಓದುತ್ತಿರುವ ಕಾಲೇಜಿಗೆ ಬಂದು ಆಕೆಯ ಭವಿಷ್ಯ ಹಾಳು ಮಾಡುವುದಾಗಿ ಬೆದರಿಕೆ ಹಾಕಿರುವ ಈತನ ಕ್ರೌರ್ಯದ ಆಡಿಯೋ ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ತನ್ನ ಕಾಮದ ತೀಟೆ ತೀರಿಸಿಕೊಳ್ಳಲು ಒಬ್ಬ ತಾಯಿಗೆ ಆಕೆಯ ಮಗಳ ಹೆಸರಿನಲ್ಲೇ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಈತನ ವಿಕೃತಿ ಕೇಳಿ ಸಾರ್ವಜನಿಕರು ಆಕ್ರೋಶದ ಜ್ವಾಲೆ ಎಬ್ಬಿಸಿದ್ದಾರೆ. ಮಗಳ ಮಾನ ರಕ್ಷಿಸಲು ತಾಯಿ ಹರಸಾಹಸ ಪಡುತ್ತಿದ್ದರೆ, ಇತ್ತ ಈ ಕಾಮುಕ ಅಧಿಕಾರಿ ಮಾತ್ರ ತನ್ನ ಅಹಂಕಾರದ ಪರಮಾವಧಿಯನ್ನು ಪ್ರದರ್ಶಿಸಿದ್ದಾನೆ.

ಕೇವಲ ಲೈಂಗಿಕ ಕಿರುಕುಳ ಮಾತ್ರವಲ್ಲದೆ, ಈತನ ಭ್ರಷ್ಟಾಚಾರದ ಹಪಾಹಪಿಯೂ ಮಿತಿಮೀರಿದೆ. ಕೌಟುಂಬಿಕ ಕೇಸ್‌ಗಳಲ್ಲಿ ಸಿಲುಕಿದವರನ್ನು ಬಿಡುಗಡೆ ಮಾಡಲು "ಇಪ್ಪತ್ತೈದು ಲಕ್ಷ ಹಣ ನೀಡಿ ಅಥವಾ ನನ್ನ ಜೊತೆ ಮಲಗಿ" ಎಂದು ಪೀಡಿಸುತ್ತಿದ್ದ ಈತ, "ನಾನು ಈ ಪೋಸ್ಟಿಂಗ್ ಪಡೆಯಲು ಗೃಹಸಚಿವರಿಗೇ ಐವತ್ತು ಲಕ್ಷ ರೂಪಾಯಿ ಕೊಟ್ಟು ಬಂದಿದ್ದೇನೆ" ಎಂದು ಅಹಂಕಾರದಿಂದ ಕೊಚ್ಚಿಕೊಂಡಿದ್ದಾನೆ. ಸಂತ್ರಸ್ತ ಮಹಿಳೆಯರು ಈಗಾಗಲೇ ಸಿಎಂ, ಗೃಹ ಸಚಿವರು ಮತ್ತು ಮಹಿಳಾ ಆಯೋಗಕ್ಕೆ ದೂರು ನೀಡಿದ್ದರೂ, ಈತನನ್ನು ಇಲಾಖೆಯ ಒಳಗಿರುವ ಕೆಲವು ಹಿರಿಯ ಅಧಿಕಾರಿಗಳೇ ರಕ್ಷಿಸುತ್ತಿದ್ದಾರೆ ಎಂಬ ಬಲವಾದ ಅನುಮಾನ ಮೂಡಿದೆ. ಸದ್ಯ ಮಂಗಳೂರು ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ಅವರು ತನಿಖೆಗೆ ಆದೇಶಿಸಿದ್ದು, ಸಂತ್ರಸ್ತೆಯರು ಧೈರ್ಯವಾಗಿ ಮುಂದೆ ಬರಬೇಕೆಂದು ಕರೆ ನೀಡಿದ್ದಾರೆ. ಇಂತಹ ಕಾಮ ಭಕ್ಷಕ ಅಧಿಕಾರಿಯನ್ನು ಕೆಲಸದಿಂದ ವಜಾಗೊಳಿಸಿ, ಜೈಲಿಗೆ ಅಟ್ಟಬೇಕೆಂಬ ಆಗ್ರಹ ಈಗ ಎಲ್ಲೆಡೆ ಕೇಳಿಬರುತ್ತಿದೆ.